Q. No. 9. b) Conditions and Warranties. Marks : 6

ಷರತ್ತು ಮತ್ತು ಭರವಸೆಗಳು.

Q. No. 10. a) Explain the concept of 'Caveat Emptor'. State the exceptions. Marks : 10

'ಕೊಳ್ಳುವವನೆ ಎಚ್ಚರಿಕೆ'ಯ ಪರಿಕಲ್ಪನೆಯನ್ನು ವಿವರಿಸಿರಿ. ಈ ನಿಯಮಕ್ಕಿರುವ ಅಪವಾದಗಳನ್ನು ಹೇಳಿರಿ.

Q. No. 10. b) 'A' agrees to supply 100 barrels of groundnut oil to 'B'. 'A' despatches 120 barrels. 'B' refuses to receive on the ground that 'A' has supplied excess oil. Advise 'A'. Marks : 6

'ಅ' ನು 100 ಬ್ಯಾರೆಲ್ ಕಡಲೆಕಾಯಿ ಎಣ್ಣೆಯನ್ನು 'ಬ' ನಿಗೆ ಪೂರೈಸಲು ಒಪ್ಪಿರುತ್ತಾನೆ. 'ಅ' ನು 120 ಬ್ಯಾರೆಲ್ ಎಣ್ಣೆಯನ್ನು ಪೂರೈಸುತ್ತಾನೆ. 'ಅ' ನು ಹೆಚ್ಚಿನ ಎಣ್ಣೆಯನ್ನು ಪೂರೈಸಿದ ಕಾರಣದಿಂದ 'ಬ' ನು ಆ ಎಣ್ಣೆಯನ್ನು ಸ್ವೀಕರಿಸಲು ನಿರಾಕರಿಸುತ್ತಾನೆ. 'ಅ' ನಿಗೆ ಸಲಹೆ ನೀಡಿರಿ.

---



## II Semester 3 Year LL.B. Examination, April/May 2022 (Dec. 2021)
## CONTRACT – II

Duration : 3 Hours Max. Marks : 80

**Instructions :**
1. **Answer any five questions from group (a) each question carries 10 marks.**
2. **Answer any five questions from group (b) each question carries 06 marks.**
3. **Figures to the right indicate marks.**
4. **Answer should be written either in English or Kannada completely.**

Q. No. 1. a) Define Contract of Indemnity. State the distinction between Contract of Indemnity and Contract of guarantee. Marks : 10

ನಷ್ಟಭರ್ತಿ ಕರಾರನ್ನು ವ್ಯಾಖ್ಯಾನಿಸಿರಿ. ನಷ್ಟಭರ್ತಿ ಕರಾರು ಮತ್ತು ಜಾಮೀನುದಾರಿಕೆ ಕರಾರುಗಳ ನಡುವಿನ ವ್ಯತ್ಯಾಸಗಳನ್ನು ಹೇಳಿರಿ.

Q. No. 1. b) Explain the rights of indemnity holder. Marks : 6

ನಷ್ಟ ಪರಿಹಾರಧಾರಕನ ಹಕ್ಕುಗಳನ್ನು ವಿವರಿಸಿ.

Q. No. 2. a) Discuss the different modes of discharge of the liability of surety. Marks : 10

ಜಾಮೀನುದಾರನ ಹೊಣೆಗಾರಿಕೆಯನ್ನು ರದ್ದುಪಡಿಸುವ ವಿವಿಧ ಸಂದರ್ಭಗಳನ್ನು ವಿವರಿಸಿರಿ.

Q. No. 2. b) 'A' advances to 'B',a Minor Rs. 1,000 on the guarantee of 'C'. On demand for repayment 'B' refuses to repay on the ground of his Minority. Can 'A' recover the amount from 'C' ? Marks : 6

'ಸ' ನ ಜಾಮೀನಿನ ಮೇಲೆ 'ಅ' ನು 'ಬ' ಎಂಬ ಅಪ್ರಾಪ್ತನಿಗೆ 1,000 ರೂ. ನೀಡುತ್ತಾನೆ. ಸಂದಾಯ ಮಾಡುವಂತೆ ಬೇಡಿಕೆ ಇಟ್ಟಾಗ ತಾನು ಅಪ್ರಾಪ್ತ ಎಂಬ ಕಾರಣದ ಮೇಲೆ ಸಂದಾಯ ಮಾಡಲು 'ಬ' ನು ನಿರಾಕರಿಸುತ್ತಾನೆ. 'ಅ' ನು 'ಸ' ನಿಂದ ಹಣವನ್ನು ವಸೂಲಾತಿ ಮಾಡಬಹುದೇ ?

Q. No. 3. a) Define Contract of bailment and what are the features of Contract of bailment ? Marks : 10

ನಿಕ್ಷೇಪಣಾ ಕರಾರನ್ನು ವ್ಯಾಖ್ಯಾನಿಸಿರಿ ಮತ್ತು ನಿಕ್ಷೇಪಣಾ ಕರಾರಿನ ಲಕ್ಷಣಗಳು ಯಾವುವು ?

Q. No. 3. b) Write a short note on duties of Bailee. Marks : 6

ನಿಕ್ಷೇಪಿತನ (ಸರಕು ಪಡೆದವನ) ಕರ್ತವ್ಯಗಳ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

Q. No. 4. a) Define Pledge. State the Circumstances in which a non-owner can make a valid Pledge. Marks : 10

ಒತ್ತೆ (ಗಿರವಿ) ಯನ್ನು ವ್ಯಾಖ್ಯಾನಿಸಿ. ಮಾಲೀಕನಲ್ಲದವನು ಗಿರವಿ ಇಡಬಹುದಾದ ಸಂದರ್ಭಗಳನ್ನು ವಿವರಿಸಿ.

Q. No. 4. b) 'A' finds a dog and makes a reasonable efforts to trace the true owner, but could not find him. Later 'A' sells that dog to 'B' who buys it without knowing that 'A' was merely a finder. Can the true owner recover the dog from 'B' ? Decide. Marks : 6

'ಅ' ನಿಗೆ ಒಂದು ನಾಯಿ ಸಿಗುತ್ತದೆ. ಅವನು ಆ ನಾಯಿಯ ಯಜಮಾನನನ್ನು ಹುಡುಕುವ ಸರಿಯಾದ ಪ್ರಯತ್ನ ಮಾಡಿದರೂ ಅದರ ಯಜಮಾನ ಸಿಗಲಿಲ್ಲ. ನಂತರ 'ಅ' ನು ಆ ನಾಯಿಯನ್ನು 'ಬ' ನಿಗೆ ಮಾರುತ್ತಾನೆ. ನಾಯಿಯು 'ಅ' ನಿಗೆ ಸಿಕ್ಕಿದ್ದು ಎನ್ನುವ ಅರಿವಿಲ್ಲದೆ 'ಬ' ನು ಅದನ್ನು ಖರೀದಿಸುತ್ತಾನೆ. 'ಬ' ನಿಂದ ಆ ನಾಯಿಯನ್ನು ಅದರ ನಿಜವಾದ ಯಾಜಮಾನ ಮರಳಿ ಪಡೆಯಬಹುದೇ ? ನಿರ್ಣಯಿಸಿರಿ.

Q. No. 5. a) Who is an Unpaid seller ? Explain the various rights of an unpaid seller. Marks : 10

ಹಣ ಸಂದಾಯವಾಗದ ಮಾರಾಟಗಾರ ಎಂದರ ಯಾರು ? ಅವನಿಗಿರುವ ವಿವಿಧ ಹಕ್ಕುಗಳನ್ನು ವಿವರಿಸಿ.

Q. No. 5. b) Duties of an Agent. Marks : 6

ಕಾರ್ಯಭಾರಿಯ ಕರ್ತವ್ಯಗಳು.

Q. No. 6. a) Define Agency by Ratification. Explain its essential elements. Marks : 10

ದೃಢೀಕರಣದಿಂದ ಕಾರ್ಯಭಾರವನ್ನು ವ್ಯಾಖ್ಯಾನಿಸಿರಿ. ಅದರ ಅವಶ್ಯಕ ಅಂಶಗಳನ್ನು ವಿವರಿಸಿರಿ.



Q. No. 6. b) 'A' an agent of 'B', sells the goods to 'C' without making proper enquiry as to the solvency to 'C'. At the time of sale 'C' was an insolvent. Principal 'B' wants to sue the agent. Advise the Principal. Marks : 6

'ಬ' ನ ಕಾರ್ಯಭಾರಿಯಾದ 'ಅ' ನು 'ಕ' ನಿಗೆ ಸರಕುಗಳನ್ನು 'ಕ' ನ ಆರ್ಥಿಕ ಸಾಮರ್ಥ್ಯದ ಬಗ್ಗೆ ಯೋಗ್ಯ ವಿಚಾರಣೆ ಮಾಡದೆ ಮಾರುತ್ತಾನೆ. ಸರಕುಗಳನ್ನು ಮಾರಾಟ ಮಾಡುವ ಸಮಯದಲ್ಲಿ 'ಕ' ನು ದಿವಾಳಿಯಾಗಿರುತ್ತಾನೆ ಯಜಮಾನನಾದ 'ಬ'ನು ಕಾರ್ಯಭಾರಿಯ ಮೇಲೆ ದಾವೆ ಹೂಡಲು ಬಯಸುತ್ತಾನೆ. ಯಾಜಮಾನನಿಗೆ ಸಲಹೆಯನ್ನು ನೀಡಿರಿ.

Q. No. 7. a) Discuss the nature and mode of determining the existence of partnership. Marks : 10

ಪಾಲುದಾರಿಕೆ ಸಂಸ್ಥೆಯ ಲಕ್ಷಣ (ಸ್ವರೂಪ) ಮತ್ತು ಅದರ ಇರುವಿಕೆಯನ್ನು ನಿರ್ಧರಿಸುವ ರೀತಿಯ ಬಗ್ಗೆ ಚರ್ಚಿಸಿರಿ.

Q. No. 7. b) Undisclosed Principal. Marks : 6

ಅಪ್ರಕಟಿತ ಯಜಮಾನ.

Q. No. 8. a) Define Partnership. Explain the rights of Partners. Marks : 10

ಪಾಲುದಾರಿಕೆ ಇದನ್ನು ವ್ಯಾಖ್ಯಾನಿಸಿರಿ. ಪಾಲುದಾರರ ಹಕ್ಕುಗಳನ್ನು ವಿವರಿಸಿರಿ.

Q. No. 8. b) 'A' and 'B' form trading Partnership for 5 years. After 2 years, 'A' is convicted of travelling on the Railway without ticket. 'A' files suit for dissolution of the firm on the ground of his own misconduct. Will he succeed ? Marks : 6

'ಅ' ಮತ್ತು 'ಬ' 5 ವರ್ಷದವರೆಗೆ ಒಂದು ವ್ಯಾಪಾರಿ ಪಾಲುಗಾರಿಕೆಯನ್ನು ರೂಪಿಸುವರು. 2 ವರ್ಷಗಳ ನಂತರ ರೈಲಿನಲ್ಲಿ ಟಿಕೇಟ್ ರಹಿತ ಪ್ರಯಾಣ ಮಾಡಿದ್ದಕ್ಕಾಗಿ 'ಅ' ನು ಶಿಕ್ಷೆಗೆ ಒಳಪಟ್ಟನು. 'ಅ' ನು ತನ್ನ ದುರ್ನಡತೆಯ ಕಾರಣದ ಮೇಲೆ ಸಂಸ್ಥೆಯನ್ನು ವಿಘಟನೆಗೊಳಿಸಬೇಕೆಂದು ದಾವೆ ಹೂಡುತ್ತಾನೆ. ಅವನು ದಾವೆಯನ್ನು ಗೆಲ್ಲಬಹುದೇ ?

Q. No. 9. a) Explain the rules of as to the passing of property under a contract of sale of goods to the buyer from a seller. Marks : 10

ಸರಕುಗಳ ಮಾರಾಟದ ಕರಾರಿನಲ್ಲಿ ಒಬ್ಬ ಮಾರಾಟಗಾರನಿಂದ ಖರೀದಿಸುವವನಿಗೆ ಸ್ವತ್ತಿನ ಹಸ್ತಾಂತರವಾಗುವ ಬಗ್ಗೆ ಇರುವ ನಿಯಮಗಳನ್ನು ವಿವರಿಸಿ.